ಹೊಸ ದಿಗಂತ



## ಸೆ.13ರಿಂದ ವಿಧಾನ ಮಂಡಲ ಅಧಿವೇಶನ ಆರಂಭ

# ಸುಗಮ ಕಲಾಪಕ್ಕಾಗಿ ನೀತಿ ನಿರೂಪಣಾ ಸಮಿತಿ

**ಬೆಂಗಳೂರು:** ವಿಧಾನಮಂಡಲ ಅಧಿವೇಶನ ಸೆ.13ರಿಂದ ಆರಂಭವಾಗಲಿದೆ. 10 ದಿನಗಳ ಕಾಲ ನಡೆಯಲಿದೆ. ಸುಗಮ ಕಲಾಪಕ್ಕಾಗಿ ನೀತಿ ನಿರೂಪಣಾ ಸಮಿತಿಯನ್ನು ರಚಿಸಲಾಗಿದೆ ಎಂದು ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.



ಬುಧವಾರ ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 15ನೇ ವಿಧಾನಸಭೆಯ 10ನೇ ಅಧಿವೇಶನವು ಸೆ.13ರಿಂದ 24ರ ವರೆಗೆ ನಡೆಯಲಿದೆ. ಕಲಾಪ ನಡೆಯುವ ವೇಳೆ ಸಿಎಂ ಒಳಗೊಂಡಂತೆ ಎಲ್ಲಾ ಸಚಿವರು, ಶಾಸಕರು ಕಡ್ಡಾಯವಾಗಿ ಹಾಜರಿರಬೇಕೆಂದು ತಿಳಿಸಲಾಗಿದೆ. ಅಧಿವೇಶನ ಯಶಸ್ವಿಯಾಗಿ ನಡೆಯಲು ಆಡಳಿತ ಹಾಗೂ ಪ್ರತಿಪಕ್ಷದವರ ಸಹಕಾರ ಕೋರುತ್ತೇನೆ ಎಂದರು. ಇದುವರೆಗೂ 18 ಬಿಲ್‌ಗಳು ಬಂದಿವೆ. ಅದರಲ್ಲಿ ನಾಲ್ಕು ಈ ಹಿಂದೆ ಬಾಕಿ ಉಳಿದಿರುವ ವಿಧೇಯಕವೂ ಸೇರಿದೆ ಎಂದರು.

ಕಾರ್ಯದರ್ಶಿಗಳಿಗೆ ಪತ್ರ ಬರೆದು ವಿಧೇಯಕದ ಪ್ರತಿ ಕೊಡಲು ಹೇಳಿದ್ದೇನೆ. ಬಜೆಟ್ ಅಧಿವೇಶನದ ಬಳಿಕ ನಡೆಯುತ್ತಿದೆ. ಸದನವನ್ನು ಗಂಭೀರವಾಗಿ ನಡೆಸಲು ನಿರ್ಧರಿಸಿದ್ದು ಸಿಎಂ, ವಿಪಕ್ಷ ನಾಯಕರು ಹಾಗೂ ಎಲ್ಲಾ ಶಾಸಕರಿಗೆ ಮನವಿ ಮಾಡಿದ್ದೇನೆ. ಕಲಾಪಕ್ಕೆ ಯಾರೂ ಗೈರಾಗದೆ ಕಡ್ಡಾಯವಾಗಿ ಭಾಗಿಯಾಗಲು ಮನವಿ ಮಾಡಿರುವೆ. ಸಚಿವರು, ಶಾಸಕರುಗಳು ಸ್ವಯಂ ಜವಾಬ್ದಾರಿ ಸ್ವೀಕರಿಸಬೇಕು. ಪ್ರಶ್ನೆ ಕೇಳಲು ಸದಸ್ಯರಿಲ್ಲ, ಉತ್ತರ ನೀಡಲು ಸಚಿವರಿಲ್ಲ ಅನ್ನುವಂತಾಗಬಾರದು. ಚುಕ್ಕೆ ಗುರುತಿನ ಪ್ರಶ್ನೆ ಹಾಗೂ ಇತರ ಪ್ರಶ್ನೆಗಳನ್ನು ವೆಬ್‌ಸೈಟ್‌ನಲ್ಲಿ ಅಪ್ಲೋಡ್ ಮಾಡಲಾಗುವುದು ಎಂದರು.

**ಶಾಸಕರ ಹಾಜರಾತಿಗೆ ಪ್ರಶಸ್ತಿ:** ವಿಧಾನಸಭೆ ಕಲಾಪದಲ್ಲಿ ಅಧಿಕಾರಿಗಳ ಹಾಗೂ ಶಾಸಕರ ಹಾಜರಾತಿ ಕಡ್ಡಾಯ. ಸಕ್ರಿಯವಾಗಿ ಕಲಾಪದಲ್ಲಿ ಪಾಲ್ಗೊಳ್ಳುವ ಶಾಸಕರಿಗೆ ಅತ್ಯುತ್ತಮ ಶಾಸಕ ಪ್ರಶಸ್ತಿ ನೀಡಲಾಗುವುದು ಎಂದು ಸ್ಪೀಕರ್ ತಿಳಿಸಿದರು.



### ಸಭಾಪತಿಗೆ ಮನೆ ಹಂಚಿಕೆಗೆ ಸಲಹೆ

ಸಭಾಪತಿ ಹಾಗೂ ಸಭಾಧ್ಯಕ್ಷರಿಬ್ಬರ ನಿವಾಸಗಳ ಕೊರತೆ ಬಗ್ಗೆ ಸರ್ಕಾರಕ್ಕೆ ತಿಳಿಸಲಾಗಿದೆ. ಸಿಎಂ ಒಳಗೊಂಡಂತೆ ಸಚಿವರಿಗೆ ಸರ್ಕಾರಿ ನಿವಾಸ ಇರಬೇಕು. ಸಭಾಪತಿ ಹಾಗೂ ಸಭಾಧ್ಯಕ್ಷರಿಗೂ ಪ್ರತ್ಯೇಕ ವಸತಿ ಗೃಹ ಇದ್ದರೆ ಒಳ್ಳೆಯದು. ಈ ಬಗ್ಗೆ ಸಿಎಂ ಜೊತೆ ಮಾತನಾಡುತ್ತೇನೆ ಎಂದು ಸ್ಪೀಕರ್ ಕಾಗೇರಿ ತಿಳಿಸಿದರು.

### ಸೆ.24ರಂದು ವಿಶೇಷ ಜಂಟಿ ಅಧಿವೇಶನ

ಅಧಿವೇಶನದ ಕೊನೆಯ ದಿನವಾದ ಸೆ.24ರಂದು ಮಧ್ಯಾಹ್ನದ ನಂತರ ಅರ್ಧ ದಿನಗಳ ಕಾಲ ಸಂಸದೀಯ ಮೌಲ್ಯಗಳ ಕುರಿತು ಜಂಟಿ ಅಧಿವೇಶನ ನಡೆಯಲಿದೆ. ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಲು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ಆಹ್ವಾನಿಸಲಾಗುವುದು. ಈಗಾಗಲೇ ಸಿಎಂ ಬಸವರಾಜ ಬೊಮ್ಮಾಯಿ ಅವರಿಗೆ ಈ ಬಗ್ಗೆ ಮನವಿ ಮಾಡಲಾಗಿದೆ. ಸೋಮವಾರ ನಡೆಯುವ ಕಲಾಪ ಸಲಹಾ ಸಮಿತಿ ಸಭೆಯಲ್ಲೂ ಈ ವಿಷಯ ಪ್ರಸ್ತಾಪಿಸಲಾಗುವುದು ಎಂದು ಕಾಗೇರಿ ತಿಳಿಸಿದರು.

ಹೊಸ ದಿಗಂತ



09 Sep 2021

# ಸಂಘದ ಹೋರಾಟದಿಂದ ಶಿಕ್ಷಕರಿಗೆ ನೆಮ್ಮದಿ: ಹೊರಟ್ಟಿ

**ಧಾರವಾಡ:** ಶಿಕ್ಷಕರು ಇಂದು ನೆಮ್ಮದಿಯಿಂದ ನೌಕರಿ ಮಾಡುತ್ತಿರುವುದಕ್ಕೆ ಶಿಕ್ಷಕರ ಸಂಘದ ಹೋರಾಟದ ಫಲದಿಂದ ಶಿಕ್ಷಕರಿಗೆ ಮಾನಸಿಕವಾಗಿ ನೆಮ್ಮದಿ ಇದ್ದಾಗ ಮಾತ್ರವೇ ಉತ್ತಮ ಬೋಧನೆ ಮಾಡಲು ಸಾಧ್ಯ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘ, ರಾಜ್ಯ ಪ್ರೌಢಶಾಲಾ ಸಹಶಿಕ್ಷಕರ ಸಂಘ ಹಾಗೂ ವಿವಿಧ ಶಿಕ್ಷಕರ ಸಂಘಟನೆಗಳ ಸಹಯೋಗದಲ್ಲಿ ನಗರದ ಜೆಎಸ್ಎಸ್‌ನ ಸನ್ನಿಧಿ ಕಲಾಕ್ಷೇತ್ರದಲ್ಲಿ ಬುಧವಾರ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ, ಅವರು ಮಾತನಾಡಿದರು.

ಶಿಕ್ಷಕರ ಕಷ್ಟಗಳಿಗೆ ಸ್ಪಂದಿಸಲು ಆರಂಭದಲ್ಲಿ ಸಂಘ ಕಟ್ಟಲು ಸಾಕಷ್ಟು ಶ್ರಮ ವಹಿಸಿದ್ದೇವೆ. ಅದರೊಂದಿಗೆ ನಿರಂತರ ಹೋರಾಟ ಹಾಗೂ ಶಿಕ್ಷಕರ



ಸಹಕಾರದೊಂದಿಗೆ ಪ್ರಾಮಾಣಿಕ ಸೇವೆ ಮಾಡುತ್ತಾ ಬಂದಿರುವ ಫಲವಾಗಿ ಇಂದು ಉತ್ತಮ ಸಾಧನೆ ಮಾಡಲು ಸಾಧ್ಯವಾಗಿದೆ ಎಂದು ಹೇಳಿದರು. 1977ರಲ್ಲಿ ಮೊದಲು ಶಿಕ್ಷಕರ ಹೋರಾಟ ಆರಂಭವಾಯಿತು. ಆರಂಭದಲ್ಲಿ ಶಿಕ್ಷಕರು ಹೋರಾಟಕ್ಕೆ ಬರಲು ಹಿಂಜರಿದರು. ಕ್ರಮೇಣ ಶಿಕ್ಷಕರಿಗೆ ಸಮಸ್ಯೆಗಳಿಗೆ ಸಂಘಟನೆ ಮೂಲಕ ರಾಜ್ಯಾದ್ಯಂತ ಹೋರಾಟಕ್ಕೆ ಮುಂದಾದರು. 1981ರಲ್ಲಿ ಮೊದಲ ಶಿಕ್ಷಕರ ಸಭೆ ನಡೆದ ಬಗ್ಗೆ ತಿಳಿಸಿದರು.

ಮುಂಡರಗಿ ತೋಂಟದ ನಿಜಗುಣಪ್ರಭು ಶ್ರೀ, ಹೊರಟ್ಟಿ ಅವರು ಶಿಕ್ಷಕರ ಹೋರಾಟದ ಜೊತೆಗೆ ಸಾಮಾಜಿಕ, ಧಾರ್ಮಿಕ ಕಾರ್ಯಗಳಿಗೂ ಸಹಕಾರ ನೀಡಿ, ಜೀವಪರ ವ್ಯಕ್ತಿ ಎಂದರು.

ಜೆಎಸ್ಎಸ್ ಕಾರ್ಯದರ್ಶಿ ಡಾ. ನ.ವಜ್ರಕುಮಾರ, ಪ್ರೊ. ಬಿ.ಆರ್.ಪೊಲೀಸ್‌ಪಾಟೀಲ, ಡಾ. ಅಜಿತ್ ಪ್ರಸಾದ್, ಡಿಡಿಪಿಐ ಮೋಹನಕುಮಾರ ಹಂಚಾಟೆ, ಮಾಜಿ ಶಾಸಕ ಎನ್.ಎಚ್. ಕೋನರಡ್ಡಿ, ಬಾಬು ಗಿರೀಶ ಪದಕಿ, ಉಮೇಶ ಬೊಮ್ಮಕ್ಕನವರ ಇದ್ದರು.